# ಬೆಂಗಳೂರೂಟ ಸಖತ್ ಇಷ್ಟ

**ಸಮೀಪ್**
**ಉದಯ 'ಸುಂದರಿ'ಯ ಕರಣ್**



◆ **ನಿಮ್ಮ ವೃತ್ತಿ ಜೀವನದ ಹಿನ್ನೋಟವನ್ನು ಅವಲೋಕಿಸಬಹುದಾ?**

ನಾನು ಮುಂಬೈಯಲ್ಲಿ ಹುಟ್ಟಿ ಬೆಳೆದಿದ್ದು ನಮ್ಮ ಮನೆ ಮಾತು ಕನ್ನಡ. ನನ್ನ ಮೊದಲ ಸೀರಿಯಲ್ 'ಗುಂಡ್ಯಾನ ಹೆಂಡತಿ' ನಂತರ 'ಗಂಗಾ' ಅವೆರಡರ ಭಾಷೆ ಉತ್ತರ ಕರ್ನಾಟಕದ ಸೊಗಡಿನ ಕನ್ನಡ. ಆಮೇಲೆ 'ರಕ್ಷಬಂಧನ' ಈಗ 'ಸುಂದರಿ' ಮಾಡುತ್ತಿದ್ದೇನೆ. ನನ್ನ ವೃತ್ತಿ ಜೀವನಕ್ಕೆ ಐದು ವರ್ಷ ತುಂಬಿದೆ.

ನಟ ಆಗಬೇಕು ಎನ್ನುವ ಆಸೆ ಇತ್ತು. ನಮ್ಮ ವಂಶದಲ್ಲಿ ಕಲಾವಿದರಾಗಲಿ ಅಥವಾ ಸಿನಿಮಾ ಇಂಡಸ್ಟ್ರೀಯ ಪರಿಚಯ ಇದ್ದವರು ಒಬ್ಬರೂ ಇರಲಿಲ್ಲ. ಅಪ್ಪನ ಬಳಿ ನನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ 'ನಿನ್ನ ಇಷ್ಟ, ಏನೇ ಮಾಡಿದರೂ ನೀನೇ ದಾರಿ ನೋಡಿಕೊಳ್ಳಬೇಕು. ಸೊನ್ನೆಯಿಂದ ಆರಂಭಿಸಬೇಕು. ಇದಕ್ಕೆ ಸಂಬಂಧಿಸಿದಂತೆ ನನ್ನಿಂದ ಆದ ಸಹಾಯವನ್ನು ಮಾತ್ರ ಮಾಡಲು ಸಾಧ್ಯ' ಎಂದರು. ಅದನ್ನೇ ಸವಾಲೆಂದು ತೆಗೆದುಕೊಂಡು ಮೊದಲು ಫೋಟೊ ಶೂಟ್ ಮಾಡಿಸಿದೆ. ನಂತರ ನಟನೆಯ ತರಗತಿಗಳಿಗೆ ಹೋದೆ. ಒಂದೆರಡು ವರ್ಷ ನಿರಂತರ ಆಡಿಷನ್ ನೀಡಿದೆ. ಹಿಂದಿಯಲ್ಲಿ ಹೆಚ್ಚು ಹುಡುಕಾಟ ಮಾಡುತ್ತಿದ್ದೆ. ಕನ್ನಡ ಸೀರಿಯಲ್‌ಗೆ ಬರುತ್ತೇನೆ ಎಂದು ಗೊತ್ತೂ ಇರಲಿಲ್ಲ. ನಮ್ಮ ಚಿಕ್ಕಮ್ಮ ಉಡುಪಿಯಲ್ಲಿದ್ದಾರೆ. ನಮ್ಮ ಚಿಕ್ಕಪ್ಪನ ಸ್ನೇಹಿತರ ಸಂಬಂಧಿಯೊಬ್ಬರು ಸಹಾಯಕ ನಿರ್ದೇಶಕರಾಗಿದ್ದರು. ಅವರು ಪಾತ್ರಧಾರಿಯ ಹುಡುಕಾಟ ಮಾಡುತ್ತಿದ್ದರು. ಫೋಟೊ ಕಳಿಸಲು ತಿಳಿಸಿದರು. ಫೋಟೊ ಕಳಿಸಿ ಆಡಿಷನ್‌ಗೆ ಬಂದಾಗ ಉತ್ತರ ಕರ್ನಾಟಕ ಭಾಷೆಯಲ್ಲಿ ಮಾತನಾಡಬೇಕು ಎನ್ನುವುದೂ ದೊಡ್ಡ ಸವಾಲು. ಅವತ್ತೇ ಬಿಟ್ಟು ಹೋಗುವ ಸ್ಥಿತಿಯಲ್ಲಿ ಇದ್ದೆ. ನಟ ಸುಂದರ್ ಶ್ರೀರಾಮ್ ಆಡಿಷನ್ ಕೊಟ್ಟು ಹೋಗು ಎಂದು ಹೇಳಿದರು. ಅವರ ಮಾತಿಗೆ ಗೌರವದಿಂದ ಆಡಿಷನ್ ಕೊಟ್ಟೆ.

◆ **ಕನ್ನಡ ಬದುಕಿನ ಕಲಿಕೆ ಹೇಗೆ ಆಯಿತು?**

ಕನ್ನಡ ಪಠ್ಯವನ್ನೇ ಓದಿರಲಿಲ್ಲ. ಮಾತನಾಡಲು ಬರ್ತಾ ಇತ್ತು. ಕರ್ನಾಟಕದ ಸೊಗಡನ್ನು ತಿಳಿಯಲು ನನ್ನ ಪ್ರಯಾಣ ಆರಂಭವಾಯಿತು. ಸ್ಥಳೀಯರ ಜೊತೆ ಒಡನಾಟ ಶುರುವಾಯಿತು. ಉತ್ತರ ಕರ್ನಾಟಕ ಭಾಷೆಯ ಕಲಿಕೆ ತುಂಬ ಕಷ್ಟ ಆಗಿತ್ತು. 'ಗಂಗಾ' ಹೊತ್ತಿಗೆ ಅನುಕೂಲ ಆಯಿತು. ಮಾತನ್ನು ಡಬ್ಬಿಂಗ್ ಮಾಡಿಸುವ ಉದ್ದೇಶ ತಂಡಕ್ಕಿತ್ತು ಇತ್ತು. ಆದರೆ ನಾನೇ ಮಾಡುತ್ತೇನೆ ಅಂದಿದ್ದೆ. ಭಾಷೆ ಕಲಿಯಲೇಬೇಕಾಯಿತು ಲೈವ್ ರೆಕಾರ್ಡ್ ಮಾಡಿದರು. ಇದು ಕನ್ನಡದಲ್ಲಿ ನಾಲ್ಕನೇ ಧಾರಾವಾಹಿ. 'ಗುಂಡ್ಯನಾ ಹೆಂಡತಿ'ಯ ನಂತರ ಹಿಂದಿಯಲ್ಲಿ ಅವಕಾಶ ಸಿಕ್ಕಿತು. ಬೇರೆ ಬೇರೆಯ ಭಾಷೆಗಳ ಧಾರಾವಾಹಿಗಳಿಗೆ ಅವಕಾಶ ಬರುತ್ತೆದೆ ಸದ್ಯ ಒಪ್ಪುವ ಸ್ಥಿತಿಯಲ್ಲಿ ನಾನಿಲ್ಲ. 'ರಾಜಸ್ತಾನ ಡೈರಿಸ್' ಅಂತ ಸಿನಿಮಾದಲ್ಲಿ ನಾಯಕನ ತಮ್ಮನಾಗಿ ಮಾಡಿದ್ದೇನೆ.

◆ **ಮುಂಬೈಗೆ ಹೋಲಿಸಿದರೆ ಬೆಂಗಳೂರು ಜೀವನ ಹೇಗಿದೆ?**

ಇಲ್ಲಿ ನಾನೊಬ್ಬನೇ ಇದ್ದೇನೆ. ಸೆಟ್‌ನಲ್ಲಿ ಕೌಟುಂಬಿಕ ವಾತಾವಣ ಸಿಗುತ್ತದೆ. ಮುಂಬೈಯಲ್ಲಿ ನನ್ನ ಪೋಷಕರ ಜೊತೆಗಿದ್ದೆ. ಬೆಂಗಳೂರಿನಲ್ಲಿ ಶೂಟಿಂಗ್ ಜಾಗ ಹೆಚ್ಚು ಖುಷಿ ಕೊಡುತ್ತದೆ. ರಾತ್ರಿ ಹಗಲು ಬಿಜಿ ಇರುವುದರಿಂದ ವ್ಯತ್ಯಾಸ ಗೊತ್ತಾಗುವುದಿಲ್ಲ. ಬೆಂಗಳೂರು–ಮುಂಬೈ ಎರಡೂ ಮಾಯಾನಗರಗಳೇ. ಆದರೆ ತುಂಬ ವ್ಯತ್ಯಾಸ ಇದೆ. ಬೆಂಗಳೂರಿನ ಊಟ ಸಖತ್ ಇಷ್ಟ. ಹವಾಮಾನ, ಇಲ್ಲಿನ ಕಾಫಿಯನ್ನು ತುಂಬ ಇಷ್ಟಪಟ್ಟು ಸವಿಯುತ್ತೇನೆ.

◆ **ಆರಂಭದ ದಿನಗಳಲ್ಲಿ ಕನ್ನಡ ಓದಿನ ಸಮಸ್ಯೆ ಹೇಗಿತ್ತು?**

ಈಗಲೂ ಕನ್ನಡ ನನಗೆ ಓದಲು ಬರುವುದಿಲ್ಲ. ಆರಂಭದಲ್ಲಿ ಉತ್ತರಕ ರ್ನಾಟಕ ಭಾಷೆ ಸಿಕ್ಕಿದ್ದರಿಂದ ತುಂಬ ಕಷ್ಟ ಅನ್ನಿಸುತ್ತಿತ್ತು. ನನ್ನ ಸೀನ್‌ಗಳನ್ನು ಇಂಗ್ಲಿಷ್ ಸ್ಕ್ರಿಪ್ಟ್‌ನಲ್ಲಿ ಬರೆದುಕೊಳ್ಳುತ್ತಿದ್ದೆ. ಮೊದಲೆಲ್ಲ ಒತ್ತಡ ಹೆಚ್ಚಾಗಿಯೇ ಇರುತ್ತಿತ್ತು. ತಪ್ಪು ಡೈಲಾಗ್ ಹೇಳಿದರೆ ಎನ್ನುವ ಅಂಜಿಕೆ ಇತ್ತು. ಈಗ ಯಾರಾದರೂ ಸೀನ್ ರೀಡಿಂಗ್ ಮಾಡಿದರೆ ಸಾಕು, ರೆಡಿಯಾಗುತ್ತೇನೆ. ಈಗ ತುಂಬ ಕಾಮಾಗಿ ತೆಗೆದುಕೊಳ್ಳುತ್ತೇನೆ.

◆ **ಯಾವ ರೀತಿಯ ಕಥೆ ಅಥವಾ ಪಾತ್ರ ಇಷ್ಟ?**

'ಗುಂಡ್ಯಾನ ಹೆಂಡ್ತಿ'ಯಲ್ಲಿ ಮೃದು ಸ್ವಾಭಾವದ ಪಾತ್ರ. ನಂತರ ಭಿನ್ನ ಪಾತ್ರಗಳೇ ಸಿಕ್ಕಿವೆ. 'ಗಂಗಾ' ಧಾರಾವಾಹಿಯಲ್ಲಿ ಸಾಮಾನ್ಯ ಮನುಷ್ಯ. ರಕ್ಷಬಂಧನ ಪಾಸಿಟಿವ್ ಪಾತ್ರವಾದರೂ ಸ್ವಲ್ಪ ನೆಗೆಟಿವ್ ಶೇಡ್ ಇತ್ತು. ಸುಂದರಿಯಲ್ಲಿ ಒಳ್ಳೆಯ ಹುಡುಗ ಸಂದರ್ಭ ಕೆಟ್ಟವನನ್ನಾಗಿ ಮಾಡುತ್ತದೆ. ಇದರಲ್ಲಿ ತುಂಬ ಒಳ್ಳೆಯ ಅವಕಾಶಗಳು ನನಗೆ ಸಿಕ್ಕಿವೆ. ಪ್ರತಿ ಸೀನ್‌ಗೆ ಭಿನ್ನ ಭಿನ್ನ ಪಾತ್ರವನ್ನು ತೆಗೆದುಕೊಳ್ಳುತ್ತದೆ. ಗಂಭೀರ ಪಾತ್ರಗಳು ಜವಾಬ್ದಾರಿಯ ವ್ಯಕ್ತಿ. ಮತ್ತು ಅಂಗವಿಕಲತೆಯನ್ನು ಪ್ರತಿನಿಧಿಸುವ ಪಾತ್ರ ಇಷ್ಟ. ಮಾತು ಇಲ್ಲದೆ ಕೇವಲ ಮುಖಭಾವವೇ ಹೆಚ್ಚು ಇರಬೇಕು.

ಪಾತ್ರದ ಬಗ್ಗೆ ಹೀಗೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಆರಂಭದ ಹದಿನೈದು ಇಪ್ಪತ್ತು ಕಂತಿನಲ್ಲಿ ಬಂದಂತೆಯೇ ಪಾತ್ರ ಮುಂದುವರಿಯುವುದಿಲ್ಲ. ಅದು ವಿಸ್ತಾರವಾಗುತ್ತ ಬೇರೆ ಬೇರೆ ರೂಪಗಳನ್ನು ಪಡೆಯುತ್ತ ಸಾಗುತ್ತದೆ. ಒನ್‌ಲೈನ್ ಕಥೆ ಮಾತ್ರ ಗೊತ್ತಾಗುತ್ತದೆ. ಅದು ಯಾರಿಗೂ ಗೊತ್ತಿರುವುದಿಲ್ಲ. ಪಾತ್ರದ ಆರಂಭ ಮುಂದೆ ವಿರುದ್ಧ ದಿಕ್ಕಿನಲ್ಲೆ ಸಾಗಬಹುದು. ಸಿನಿಮಾದಂತೆ ಧಾರಾವಾಹಿ ಪಾತ್ರ ಇರುವುದಿಲ್ಲ. ಸಂದರ್ಭ ಪಾತ್ರವನ್ನು ಬದಲಿಸಬಹುದು. ಮೊದಲಿಗೆ ಇದ್ದ ಕಥೆ ಯಾವ ಬದಲಾವಣೆಯನ್ನಾದರೂ ಪಡೆಯಬಹುದು. ಅದನ್ನು ಲೇಖಕರೂ ಹೇಳುವುದು ಕಷ್ಟ.

■ **ರಾಘವೇಂದ್ರ ಕೆ.**